# ನೆನಪಿನ ಸುರುಳಿ ಬಿಚ್ಚಿದಾಗ

❑ ಮಂಗಳಮ್ಮ

ರಾಮಕೃಷ್ಣ ಮಹಾಸಂಘದ 'ದಿವ್ಯತ್ರಯ'ರ ಜಯಂತ್ಯುತ್ಸವಗಳು ಭಕ್ತಸಮೂಹವೇ ಅಲ್ಲದೆ ಸಾಮಾನ್ಯ ಜನತೆಯ ಭಾವಪ್ರಪಂಚವನ್ನೂ ಎಷ್ಟು ಆಳವಾಗಿ ಪ್ರಭಾವಗೊಳಿಸಬಲ್ಲದು ಎಂಬುದನ್ನು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ ಆತ್ಮೀಯವಾದ ಶೈಲಿಯಲ್ಲಿ ತಿಳಿಸಿಕೊಟ್ಟಿರುವ ಶ್ರೀಮತಿ ಮಂಗಳಮ್ಮನವರು ತಮ್ಮ ಇಳಿವಯಸ್ಸಿನಲ್ಲಿಯೂ ಮೈಸೂರಿನಲ್ಲಿರುವ 'ಚೇತನ ಟ್ರಸ್ಟ್' ಎಂಬ ಬುದ್ಧಿಮಾಂದ್ಯ ಮತ್ತು ಮಾನಸಿಕ ಅಸ್ವಸ್ಥರ ಪುನರುಜ್ಜೀವನ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

'ಏಳಿ! ಎದ್ದೇಳಿ!'—ಸ್ವಾಮಿ ವಿವೇಕಾನಂದರ ಜೀವನದ ಪ್ರಮುಖ ಘಟನೆಗಳನ್ನು ಆಧರಿಸಿದ ನಲವತ್ತು ವರ್ಣಚಿತ್ರಗಳಿರುವ ಒಂದು ಚಿತ್ರಪ್ರದರ್ಶನ. ಸ್ವಾಮೀಜಿಯವರ ಜೀವನ ಸಂದೇಶವನ್ನು ದೇಶ ವಿದೇಶಗಳಲ್ಲಿ ಬಿತ್ತರಿಸಲು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಈ ನಲವತ್ತು ವರ್ಣಚಿತ್ರಗಳ ಕಿಟ್‌ಗಳನ್ನು ಪ್ರದರ್ಶನಕ್ಕಾಗಿ ಸಾವಿರಾರು ಸಂಖ್ಯೆಯಲ್ಲಿ ಸಿದ್ಧಪಡಿಸಿತ್ತು.

ಮೈಸೂರಿನಲ್ಲಿರುವ 'ಚೇತನ ಟ್ರಸ್ಟ್' (ಬುದ್ಧಿಮಾಂದ್ಯ ಮತ್ತು ಮಾನಸಿಕ ಅಸ್ವಸ್ಥರ ಪುನರುಜ್ಜೀವನ ಕೇಂದ್ರ) ಸಹ 'ಏಳಿ ಎದ್ದೇಳಿ'ಯ ಚಿತ್ರಪೆಟ್ಟಿಗೆಗಳನ್ನು ಮುಖ್ಯವಾಗಿ ಗ್ರಾಮಾಂತರ ಪ್ರದೇಶದ ಶಾಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಹಾಗೂ ಸಾರ್ವಜನಿಕ ಸಮಾರಂಭಗಳಲ್ಲಿ ಪ್ರಚಾರ ಮಾಡುವ ಉದ್ದೇಶ ಹೊಂದಿದೆ. 'ಟ್ರಸ್ಟ್'ನ ವ್ಯವಸ್ಥಾಪಕರಾದ ಡಾ. ಪಿ. ವಿದ್ಯಾಸಾಗರ್ ಅವರು ಜುಲೈ ತಿಂಗಳ ಮೊದಲ ವಾರದಲ್ಲಿ "ಅಜ್ಜಿ, ನಿಮಗೊಂದು ಕೆಲಸ ಕೊಡಬೇಕೆಂದಿದ್ದೇನೆ. ಮಾಡುತ್ತೀರಾ?" ಎಂದರು. "ನನ್ನ ಕೈಲಿ ಆಗುವುದಾದರೆ ಖಂಡಿತ ಮಾಡುತ್ತೇನೆ" ಎಂದಾಗ 'ಏಳಿ! ಎದ್ದೇಳಿ!'ಯ ಪ್ರಚಾರಕಾರ್ಯವನ್ನು ಮಾಡಬೇಕೆಂದು ತಿಳಿಸಿದರು. ಮಾತು ಮೌನ ತಾಳಿತು. ಆ 'ಬಿರುಗಾಳಿ ಸಂನ್ಯಾಸಿ' ಆ 'ಜ್ಞಾನ ವಾರಿಧಿ'ಯ ಜೀವನವನ್ನು ಪ್ರಚುರಪಡಿಸುವ ಯೋಗ್ಯತೆ ನನಗಿದೆಯೇ? ಎಂದು ಮನಸ್ಸು ಹಿಂದೆಮುಂದೆ ತೂಗಾಡಿತು. ಇದಕ್ಕೆ ಮುನ್ಸೂಚನೆಯೇನೊ ಎಂಬಂತೆ, ಕೆಲವು ದಿನಗಳಿಂದ ದಿವ್ಯತ್ರಯರ ಜೀವನವನ್ನು ಹಳ್ಳಿಯ ಶಾಲಾಮಕ್ಕಳಿಗೆ ಹೇಳಬೇಕು ಎನ್ನುವ ಒಂದು ಹಂಬಲ ಮನಸ್ಸಿನಲ್ಲಿ ಏಳುತ್ತಿತ್ತು, "ಹೆಳವ ಬೆಟ್ಟ ಹತ್ತುವ ಆಸೆ" ಪಟ್ಟಂತೆ. ಮನಸ್ಸಿನ ಆಸೆಗೆ ಕಡಿವಾಣ ಹಾಕುತ್ತಿದ್ದೆ. ಕಾಣದ ಕೈವಾಡ 'ಏಳಿ! ಎದ್ದೇಳಿ!' ಮೂಲಕ ನನ್ನನ್ನು 'ಎಚ್ಚರಿಸಿದೆ' ಎಂದು ಮನಸ್ಸಿಗೆ ಆನಂದ. ಈ ಕಾರ್ಯವು ನನ್ನ ಮೂಲಕ 'ನುಡಿ ನಮನ'ವನ್ನು ಆ ಮಹಾನ್‌ವ್ಯಕ್ತಿಗೆ ಸಲ್ಲಿಸುವುದಕ್ಕೆ ಸಿಕ್ಕಿರುವ ಸದವಕಾಶವೆಂದು ಒಪ್ಪಿಕೊಂಡೆ. ಹೇಗೆ ಕಾರ್ಯಕ್ರಮ ನಡೆಸಬೇಕು? ಶಾಲೆಗಳ ಮುಖ್ಯೋಪಾಧ್ಯಾಯರನ್ನು ಭೇಟಿಮಾಡಿ, ಚಿತ್ರಪ್ರದರ್ಶನ ನಡೆಸಲು ದಿನಾಂಕ, ವೇಳೆ ಇತ್ಯಾದಿಗಳನ್ನು ಮನಸ್ಸಿನಲ್ಲೇ ರೂಪಿಸಿಕೊಳ್ಳತೊಡಗಿದೆ. ಕಾರ್ಯಕ್ರಮದ ವಿಧಿವಿಧಾನಗಳನ್ನು ಯೋಚಿಸುತ್ತಾ ಯೋಚಿಸುತ್ತಾ ನೆನಪು ಹಿಂದೆ ಓಡಿ ಸುರುಳಿಯನ್ನು ಬಿಚ್ಚತೊಡಗಿತು. ನಾನು ಕಂಡು ಅನುಭವಿಸಿದ 'ದಿವ್ಯತ್ರಯ'ರ ಶತಮಾನೋತ್ಸವದ ಘಟನೆಗಳು ನನ್ನ ಕಣ್ಮುಂದೆ ಹಾದುಹೋದವು.

೧೯೩೦ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ನನ್ನ ಹಿರಿಯಣ್ಣನವರ ಜೊತೆ ಇದ್ದೆ. ಆಶ್ರಮಕ್ಕೆ ಹತ್ತಿರವೇ ಮನೆ ಇತ್ತು. ನನ್ನ ಇನ್ನಿಬ್ಬರು ಅಣ್ಣಂದಿರು ಆಶ್ರಮದಲ್ಲಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದರು. ನಾನೂ ಸಹ ಶಾಲೆಯಿಂದ ಬಂದಮೇಲೆ ಸಂಜೆ ಆರತಿ ವೇಳೆಗೆ ಹೋಗುತ್ತಿದ್ದೆ. 'ಕಾಯುಂಡೆ' ಪ್ರಸಾದದ ಆಸೆ ಮುಖ್ಯವಾಗಿತ್ತು. ಭಾನುವಾರಗಳಂದು ಸ್ವಾಮಿ ತ್ಯಾಗೀಶಾನಂದರು ಹಳೆಕಟ್ಟಡದ ವರಾಂಡದಲ್ಲಿ ಚಿಕ್ಕ ಕಾಲುಮಣೆ ಮುಂದಿಟ್ಟುಕೊಂಡು, ಅದರ ಮೇಲೆ ಕೈಯೂರಿ, ಸ್ವಲ್ಪ ಹಿಂದೆ ಮುಂದೆ ತೂಗಾಡುತ್ತ ಮಾತನಾಡುತ್ತಿದ್ದರು. ಅವರ ಬಿಳಿಗಡ್ಡ, ಸೌಮ್ಯ ಮುಖ, ತೇಜೋಮಯ ಮೂರ್ತಿ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. ಇಂಗ್ಲಿಷಿನಲ್ಲಿ ಉಪನ್ಯಾಸ ಮಾಡುತ್ತಿದ್ದರು. ನನ್ನದು ಹುಡುಗುಬುದ್ಧಿ, ಉಪನ್ಯಾಸದ ಕಡೆ ಲಕ್ಷ್ಯವಿರುತ್ತಿರಲಿಲ್ಲ. ಈಗ ಅಂಥಾ ಸದವಕಾಶ ಕಳೆದುಕೊಂಡೆನಲ್ಲಾ ಎಂದು ಅನಿಸುತ್ತಿದೆ!

೧೯೩೦ರ ಡಿಸೆಂಬರ್ ಕೊನೆಯ ವಾರದಲ್ಲಿ ಶ್ರೀರಾಮಕೃಷ್ಣ ಪರಮಹಂಸರ ಜನ್ಮಶತಮಾನೋತ್ಸವ ಹಾಗೂ ಅವರ ಮಹಾಸಮಾಧಿಯ ಸುವರ್ಣೋತ್ಸವ ಸಮಾರಂಭದ 'ಸಪ್ತಾಹ' ನಡೆಯಿತು. ಈಗ ಶಾಶ್ವತವಾಗಿ ಕಟ್ಟಿರುವ ಸಭಾಮಂಟಪವಿರುವ ಜಾಗದಲ್ಲಿ ತಾತ್ಕಾಲಿಕ ಚಪ್ಪರ ಹಾಕಿದ್ದರು. ತಳಿರು, ತೋರಣ, ಧ್ವಜ ಪತಾಕೆಗಳ ಅಲಂಕಾರ. ಒಂದು ರೀತಿಯ ಸಡಗರದಿಂದ ಭಾಗವಹಿಸುತ್ತಿದ್ದೆ. 'ದರಿದ್ರನಾರಾಯಣ ಸೇವೆ'ಯ ದಿನ ಆಶ್ರಮದ ಬಲಭಾಗದ ರಸ್ತೆಯಲ್ಲಿ (ಈಗ ರಾಮಕೃಷ್ಣವೃತ್ತ) ಅಡ್ಡವಾಗಿ ಪರದೆ ಕಟ್ಟಿದ್ದರು. ಬಸವನಗುಡಿ ರಸ್ತೆಯ ಇನ್ನೊಂದು ಕೊನೆ ಚಾಮರಾಜಪೇಟೆಯ ಪ್ರಾರಂಭದಲ್ಲಿ ರಸ್ತೆಗೆ ಅಡ್ಡಪರದೆ ಹಾಕಿ ಮಧ್ಯದಲ್ಲಿ ಉದ್ದಕ್ಕೂ ಎರಡೂ ಕಡೆ ಸಾಲಾಗಿ ಜನರನ್ನು ಕೂರಿಸಿ ಎಲೆಹಾಕಿ ಬಡಿಸಿದ್ದು, ಶ್ರದ್ಧಾವಂತ ಯುವಕರು ಆಶ್ರಮದ ಸ್ವಾಮೀಜಿಗಳ ಮೇಲ್ವಿಚಾರಣೆಯಲ್ಲಿ ಶಿಸ್ತಿನಿಂದ ಕಾರ್ಯಕ್ರಮಗಳನ್ನು ನಡೆಸಿದ್ದು ಇನ್ನೂ ಮನಸ್ಸಿನಲ್ಲಿ ಹಚ್ಚಹಸುರಾಗಿ ನಿಂತಿದೆ. ಕಾರಣಾಂತರದಿಂದ 'ಸಪ್ತಾಹ' ಪೂರ್ತಿ ಕಾರ್ಯಕ್ರಮದಲ್ಲಿ ಭಾಗವಹಿಸಲಾಗಲಿಲ್ಲ. ಎಲ್ಲದಕ್ಕೂ 'ಯೋಗ'ವಿರಬೇಕಲ್ಲವೇ? ಆ ವೇಳೆಗೆ ರಾಮಕೃಷ್ಣರ ಉಪದೇಶವಾಕ್ಯಾವಳಿ, ಶ್ರೀರಾಮಕೃಷ್ಣ ಲೀಲಾಮೃತಗಳನ್ನು ಓದಿದ್ದೆ. ಅನಂತರ ಕುವೆಂಪುರವರ 'ಸ್ವಾಮಿ ವಿವೇಕಾನಂದ', 'ಶ್ರೀರಾಮಕೃಷ್ಣ ಪರಮಹಂಸ' ಓದಿದೆ. 'ಸ್ವಾಮಿ ವಿವೇಕಾನಂದ'ದ ಮೊದಲ ಪರಿಚ್ಛೇದ 'ಯಾರಿವನು?' ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತು. ದಿವ್ಯತ್ರಯರಲ್ಲಿ ಶ್ರೀರಾಮ

ಕೃಷ್ಣರ ಜನ್ಮಶತಮಾನೋತ್ಸವ ಕಂಡು ಆನಂದಿಸಿದ್ದು, ಜೀವನದಲ್ಲಿ ಮುಂದಕ್ಕೆ ಅವರ ಕೃಪಾಶೀರ್ವಾದದಿಂದ 'ಆಶ್ರಮ'ದ ಸತ್ಸಂಗಕ್ಕೆ ನಾಂದಿಯಂತಾಗಿತ್ತು.

ಸದವಕಾಶಗಳನ್ನು ಸದುಪಯೋಗಪಡಿಸಿಕೊಂಡು ೧೯೩೯ ಮತ್ತು ೧೯೪೨ರಲ್ಲಿ ನನ್ನ ಇಬ್ಬರು ಅಣ್ಣಂದಿರು ರಾಮಕೃಷ್ಣ ಮಹಾಸಂಘಕ್ಕೆ ಸೇರಿದರು. ಆಗಿನಿಂದ ಆಶ್ರಮದ ಸಂಪರ್ಕ ಇನ್ನೂ ಹೆಚ್ಚಾಯಿತು. ೧೯೪೨ರಿಂದ ಮಂಡ್ಯದಲ್ಲಿ ನನ್ನ ಗೃಹಸ್ಥ ಜೀವನ ಆರಂಭವಾಯಿತು. ೧೯೫೨ರಿಂದ ಸ್ವಾಮಿ ಸೋಮನಾಥಾನಂದರು ತಿಂಗಳಿಗೆ ೨ ಸಲ ಉಪನ್ಯಾಸಗಳನ್ನು ಕೊಡಲು ಮಂಡ್ಯಕ್ಕೆ ಮೈಸೂರಿನಿಂದ ಬರಲಾರಂಭಿಸಿದ ಮೇಲೆ, ಮಂಡ್ಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾರಂಭವಾಯಿತೆನ್ನಬಹುದು. ೧೯೫೪ರಲ್ಲಿ ಶ್ರೀಮಾತೆ ಶಾರದಾದೇವಿಯವರ ಜನ್ಮಶತಮಾನೋತ್ಸವವನ್ನು ವಿಶೇಷವಾಗಿ ಆಚರಿಸಬೇಕೆಂದು ಸ್ವಾಮೀಜಿಯವರು ಸಲಹೆ ಮಾಡಿದರು. ಮಂಡ್ಯದ ಕೆಲವು ಹಿರಿಯ ಹಾಗೂ ಗಣ್ಯ ಮಹಿಳೆಯರನ್ನು ಭೇಟಿ ಮಾಡಿ ಒಂದು ಸಮಿತಿ ರಚಿಸಿದೆವು. ಖ್ಯಾತ ಲೇಖಕಿ ಶ್ರೀಮತಿ ಆರ್ಯಾಂಬ ಪಟ್ಟಾಭಿಯವರ ತಾಯಿ ಶ್ರೀಮತಿ ತಂಗಮ್ಮನವರನ್ನು ಈ ಸಮಿತಿಗೆ ಅಧ್ಯಕ್ಷೆಯಾಗಿ ಮಾಡಿ ಕಾರ್ಯಕ್ರಮ ರೂಪಿಸಿಕೊಂಡು "ದರಿದ್ರನಾರಾಯಣ ಸೇವೆ"ಯನ್ನು ನಡೆಸಬೇಕೆನ್ನುವ ಸ್ವಾಮೀಜಿಯವರ ಸಲಹೆಯಂತೆ, ಸಮಿತಿಯವರು ತಮ್ಮ ಕೈಲಾದಷ್ಟು ದವಸ, ಧಾನ್ಯಗಳನ್ನು ಹಾಕಿ ಕೆಲವರಿಗೆ ಊಟ ಹಾಕುವುದೆಂದು ತೀರ್ಮಾನಿಸಿದೆವು. ಆದರೆ ಸ್ವಾಮೀಜಿಯವರು "ಈ ಸೇವೆ ಕೆಲವರಿಂದ ಮಾತ್ರ ಆಗಬಾರದು, ಮಂಡ್ಯದ ಜನತೆಯ ಸೇವೆಯಾಗಬೇಕು. ನಾಗರಿಕರೆಲ್ಲರಿಗೂ ಈ ಅವಕಾಶ ದೊರಕಬೇಕು. ಜೋಳಿಗೆ ಹಿಡಿದು ಹೊರಡಿ, ಸಂಗ್ರಹಿಸಿ, ಕಾರ್ಯಕ್ರಮ ನಡೆಸುವುದು ಉತ್ತಮ" ಎಂದರು.

ಹಿರಿಯರಿಂದ ಹಿಡಿದು ಕಿರಿಯರವರೆಗೆ 'ಜೋಳಿಗೆ' ಹಿಡಿದು ಉತ್ಸಾಹದಿಂದ ಮನೆಮನೆಯಲ್ಲೂ ಧನ, ಧಾನ್ಯ ಸಂಗ್ರಹಿಸಿದರು. ಮೂರು ಕಾಸಿನಿಂದ, ಒಂದು ಹಿಡಿ ಅಕ್ಕಿಯಿಂದ ರೂಪಾಯಿ, ಸೇರುಗಳತನಕ ವಿವಿಧ ವಸ್ತುಗಳು 'ಜೋಳಿಗೆ'ಗೆ ಬೀಳುತ್ತಿದ್ದವು. ಆಗ ಮಂಡ್ಯದ ಮೈಸೂರು ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿದ್ದ ಶ್ರೀ ಸತ್ಯಮೂರ್ತಿಯವರು ಹಳ್ಳಿಗಳಿಂದ ೭ ಪಲ್ಲ ಅಕ್ಕಿ, ಹಾಗೂ ಹಣವನ್ನು ಕೊಡಿಸಿಕೊಟ್ಟರು. ಅಕ್ಕಿಗೆ ತಕ್ಕ ಸಾಂಬಾರ ಪದಾರ್ಥಗಳನ್ನು ಸಂಗ್ರಹಿಸಲು ಹಿಂದೂ ಪತ್ರಿಕೆಯ ಏಜೆಂಟರಾಗಿದ್ದ ಶ್ರೀ ಡಿ. ರಾಮಸ್ವಾಮಿ ಅಯ್ಯಂಗಾರ್ ಅವರ ಜೊತೆ ನಾನು, ಇನ್ನಿಬ್ಬರು ಮಹಿಳೆಯರು ಪೇಟೆ ಕಡೆ ಹೊರಟೆವು. ಕೇವಲ ಒಂದು ಗಂಟೆಯೊಳಗೆ ಒಂದು ವ್ಯಾನ್ ತುಂಬುವಷ್ಟು ಬೇಳೆ, ಕಾಳು, ಬೆಲ್ಲ, ಉಪ್ಪು, ಹುಣಸೆಹಣ್ಣು ಇತ್ಯಾದಿ ಸಂಗ್ರಹಿಸಿದೆವು. ಮಹಾಶಿವರಾತ್ರಿಯ ದಿನ ನಾರಾಯಣ ಸೇವೆ ನಡೆಸುವುದೆಂದು ತೀರ್ಮಾನಿಸಿದ್ದಾಯಿತು. ಪುರಸಭಾಧ್ಯಕ್ಷರಾಗಿದ್ದ ಶ್ರೀ ಎಂ.ಬಿ.ಬೋರೇಗೌಡರು ಐವತ್ತು ಸೇರು ಅಕ್ಕಿ ಬೇಯುವಂಥ ಪಾತ್ರೆಗಳನ್ನೂ ಸುಮಾರು ನಾಲ್ಕು-ನಾಲ್ಕೂವರೆ ಅಡಿ ಎತ್ತರದ ಕೊಳಗಗಳನ್ನೂ ಅರ್ಧ ಟನ್ ಸೌದೆಯನ್ನೂ ಕಳುಹಿಸಿದರು. ಕೇವಲ ೪೦ ರೂ.ಗಳಿಗೆ ಅಡುಗೆಯವರು ತಮ್ಮ ಸೇವೆಯನ್ನು ಸಲ್ಲಿಸಲು ಸಿದ್ಧರಾದರು. ಲಾಯರ್ ಒಬ್ಬರ ಮಗಳ ಮದುವೆ. ಸಂಜೆ ಆರತಕ್ಷತೆ ಇತ್ತು. ಡಾ.ಸೇತೂರಾಯರು ಮದುವೆ ಮನೆಯಿಂದ ಸ್ವಲ್ಪ ದೂರದಲ್ಲಿ ನಿಂತು ಚೀಲ ಹಿಡಿದು, "ನಾರಾಯಣ ಸೇವೆಗೆ ಸಹಾಯ" ಎಂದು ಕೇಳುತ್ತಿದ್ದರು. ಸುಮಾರು ೩೦೦ ತೆಂಗಿನಕಾಯಿ ಸಂಗ್ರಹವಾಯ್ತು. ಹಿಂದಿನ ರಾತ್ರಿಯಿಂದಲೇ ಅಡುಗೆ ಪ್ರಾರಂಭಿಸಿ, ಬೆಳಗಿನ ೬ ಘಂಟೆ ವೇಳೆಗೆ ಅನ್ನ, ತರಕಾರಿ ಹಾಕಿ ಸಾಂಬಾರು, ಅಕ್ಕಿನುಚ್ಚಿನ ಪಾಯಸ ಸಿದ್ಧಮಾಡಿದರು.

ನಮ್ಮ ಮನೆ ಎದುರಿಗಿದ್ದ ಸರ್ಕಾರಿ ಬಾಲಕಿಯರ ಮಾಧ್ಯಮಿಕ ಶಾಲೆಯಲ್ಲಿ ಅಡುಗೆ ಊಟದ ವ್ಯವಸ್ಥೆ ಮಾಡಿದ್ದೆವು. ಶಿವರಾತ್ರಿಯ ದಿನ ಮೈಸೂರಿನಿಂದ ಸ್ವಾಮೀಜಿ ಬೆಳಿಗ್ಗೆ ಎಂಟೂವರೆ ಗಂಟೆ ವೇಳೆಗೆ ಬಂದರು. ಎಲ್ಲ ವ್ಯವಸ್ಥೆಯನ್ನೂ ಪರಿಶೀಲಿಸಿದರು. ಅಂದು ಮಂಡ್ಯದ ಜನತೆಗೆ ಸಡಗರದ ಸಮಾರಂಭ. ೧೦ ಗಂಟೆಯಿಂದ ೧೨ ಗಂಟೆಯವರೆಗೆ ಮೈಸೂರು ಬ್ಯಾಂಕಿನ ನೌಕರರ ತಂಡದವರಿಂದ ಭಜನೆ. ಸ್ವಾಮೀಜಿಯವರು "ಇವರಿಗೆಲ್ಲ ಏನು ಪ್ರಸಾದ ಮಾಡಿದ್ದೀರಿ?" ಎಂದರು. ನಮಗೆ ಆ ಕಡೆ ಗಮನವೇ ಇರಲಿಲ್ಲ. ಪವಾಡ ಸದೃಶವಾಗಿ ಹನ್ನೊಂದು ಘಂಟೆಯ ವೇಳೆಗೆ ಒಬ್ಬ ಹಳ್ಳಿ ರೈತ ಒಂದು ಗೊನೆ ಬಾಳೆಹಣ್ಣು, ಒಂದು ಪಿಂಡಿ ಬೆಲ್ಲ ತಂದುಕೊಟ್ಟ. ಪ್ರಸಾದ ಸಿದ್ಧವಾಯಿತು. ಹನ್ನೆರಡು ಘಂಟೆಗೆ ಶ್ರೀಮಾತೆಯವರ ಮಂಗಳಾರತಿಯ ನಂತರ ನೆರೆದಿದ್ದ ಭಕ್ತ ಸಮೂಹಕ್ಕೆ 'ರಸಾಯನ' ಪ್ರಸಾದ ವಿನಿಯೋಗವಾಯ್ತು. ಹಿಂದಿನ ದಿನ ಕೊಳೆಗೇರಿ ಮತ್ತು ಕಾರ್ಮಿಕರ ಕಾಲೋನಿಯಲ್ಲಿ ೧೨ ಘಂಟೆಯ ವೇಳೆಗೆ ಊಟಕ್ಕೆ ಎಲ್ಲರೂ ಬರಬೇಕೆಂದು 'ಡಂಗುರ' ಸಾರಿಸಿದ್ದೆವು. ಜನ ಜಮಾಯಿಸಿದ್ದರು.

ಶಾಲೆಯ ಆವರಣದಲ್ಲಿ ಒಂದು ಸಲಕ್ಕೆ ೩೦೦ ಜನರಂತೆ ಎಲೆ ಹಾಕಿ ಊಟ ಬಡಿಸಲಾಯ್ತು. ಎರಡು ಬಾರಿ ಊಟವಾದರೂ ಅನ್ನದ ರಾಶಿ ಸಮೃದ್ಧಿಯಾಗಿತ್ತು. ಇನ್ನೂ ಜನ ಬಂದಿರಲಿಲ್ಲ. ಕೂಡಲೆ ಶ್ರೀ ಸತ್ಯಮೂರ್ತಿಯವರು ಸಕ್ಕರೆ ಕಾರ್ಖಾನೆ ಬಳಿ ಹೋಗಿ ಒಂದೂವರೆ ಘಂಟೆಗೆ ಸರದಿ ಬದಲಾಯಿಸುವ ಸಮಯದಲ್ಲಿ ಎಲ್ಲರನ್ನೂ ಊಟಕ್ಕೆ ಕಳಿಸಬೇಕೆಂದು ಕಾರ್ಖಾನೆ ಮುಖ್ಯಸ್ಥರಿಗೆ ತಿಳಿಸಿದರು. ತಂಡೋಪತಂಡವಾಗಿ ಜನ ಬಂದರು. ಸಾಯಂಕಾಲ ನಾಲ್ಕು ಘಂಟೆಗೆ "ನಾರಾಯಣ ಸೇವೆ" ಮುಗಿಯಿತು. ಚಿಕ್ಕವರು ದೊಡ್ಡವರೆನ್ನದೆ, ಮಹಿಳೆಯರೂ ಪುರುಷರೂ ಈ 'ಸೇವೆ'ಯಲ್ಲಿ ಭಾಗಿಗಳಾಗಿ ಬಹಳ ಸಂತೋಷದಿಂದ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲು ಸಹಕರಿಸಿದರು. ಸ್ವಾಮೀಜಿಯವರು ಸಹ ಆನಂದದಿಂದ ಮೈಸೂರಿಗೆ ಹಿಂತಿರುಗಿದರು. ಹಣಸಂಗ್ರಹಣೆಯಲ್ಲಿ ಉಳಿದದ್ದರಲ್ಲಿ ಒಂದು ನೂರು ರೂಪಾಯಿಗಳನ್ನು ಕೊಲ್ಕತಾದಲ್ಲಿ ಆಗ ಸ್ಥಾಪಿತವಾದ 'ಶಾರದಾಮಠ'ಕ್ಕೆ ಮಂಡ್ಯ ಜನತೆಯ ಪರವಾಗಿ ಕಾಣಿಕೆ ಕಳಿಸಿದೆವು. ಆ ವರ್ಷ ಪೂರ್ತಿ ಸ್ವಾಮೀಜಿಯವರು ಶ್ರೀಮಾತೆಯವರ ಜೀವನವನ್ನು

ಉಪನ್ಯಾಸದ ಮೂಲಕ ಮಂಡ್ಯದ ಜನತೆಗೆ ಪ್ರಚಾರ ಮಾಡಿದರು. ತಮ್ಮ ಜೊತೆಗೆ ಹಿರಿಯ ವಿದ್ವಾಂಸರುಗಳನ್ನೂ ಕರೆತಂದು, ಸಾಹಿತ್ಯದ 'ರಸದೌತಣ' ಮಾಡಿಸಿದರು. ಈ ಕಾರ್ಯಕ್ರಮಗಳೆಲ್ಲ ಕೇವಲ ಒಂದು ವಾರದಲ್ಲಿ 'ಪವಾಡ'ದಂತೆ ನಡೆದವು. ಅನಂತರ ಸಮಿತಿಯನ್ನು ವಿಸರ್ಜಿಸಲಾಯಿತು. ಸ್ವಾಮಿ ಸೋಮನಾಥಾನಂದರು ತಮ್ಮ ಉಪನ್ಯಾಸಗಳ ಜೊತೆಗೆ ಶಾಲಾಕಾಲೇಜುಗಳಲ್ಲಿ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸಿ 'ದಿವ್ಯತ್ರಯ'ರ ಜೀವನ ಧ್ಯೇಯಗಳ ಪ್ರಚಾರವನ್ನು ನಿರಂತರವಾಗಿ ನಡೆಸಿದರು.

೧೯೬೩ ಫೆಬ್ರವರಿಯಿಂದ ಸ್ವಾಮಿ ವಿವೇಕಾನಂದರ ಜನ್ಮ ಶತಾಬ್ದ. ಈ ವೇಳೆಗೆ ದಿವ್ಯತ್ರಯರ ಜೀವನ, ಸೇವಾ ಭಾವನೆ ಜನತೆಯಲ್ಲಿ ಸಾಕಷ್ಟು ಜಾಗೃತಿಯನ್ನುಂಟುಮಾಡಿದ್ದವು. ಶಾಲಾ ಕಾಲೇಜುಗಳ ಮುಖ್ಯಸ್ಥರು, ಸಂಘ, ಸಂಸ್ಥೆಗಳ ಗಣ್ಯರೆಲ್ಲ ಸೇರಿ ಶತಮಾನೋತ್ಸವದ ಕಾರ್ಯಕ್ರಮಗಳನ್ನು ರೂಪಿಸಿದೆವು. ಸ್ವಾಮಿ ಸೋಮನಾಥಾನಂದರ ಪ್ರೋತ್ಸಾಹದಿಂದಾಗಿ ಕಾರ್ಯಕ್ರಮವನ್ನು ವೈಭವದಿಂದ ಆಚರಿಸಲು ಸಿದ್ಧರಾದೆವು. ಪಿ.ಇ.ಎಸ್.ಕಾಲೇಜಿನ ಮುಖ್ಯಸ್ಥರಾಗಿದ್ದ ಶ್ರೀ ಕೆ.ವಿ. ಶಂಕರೇಗೌಡರನ್ನು ಭೇಟಿಯಾಗಿ, ದತ್ತಿನಿಧಿಯನ್ನಿಟ್ಟು, ಅದರ ಬಡ್ಡಿಯನ್ನು ಆಯಾ ವರ್ಷದಲ್ಲಿ ಇಂಜಿನಿಯರಿಂಗ್ ಪದವಿಯಲ್ಲಿ ಉತ್ತಮ ಅಂಕ ಪಡೆದವರಿಗೆ ಕೊಡುವ ಅಭಿಪ್ರಾಯವನ್ನು ತಿಳಿಸಿದೆ. ಸಮ್ಮತಿ ಸೂಚಿಸಿದರು. ಹತ್ತುಸಾವಿರ ರೂಪಾಯಿಗಳನ್ನು ಸಂಗ್ರಹ ಮಾಡಿ 'ಶಾಶ್ವತನಿಧಿ' ಯನ್ನು ಸ್ಥಾಪಿಸಬೇಕೆಂದೂ, ತಾವೂ ಸಹ ಅದಕ್ಕೆ ಪ್ರಯತ್ನ ಪಡುವುದಾಗಿಯೂ ಹೇಳಿದರು. ಕೆಲವು ದಿನಗಳ ಅನಂತರ ನನಗೆ ಭೇಟಿಯಾಗಲು ಹೇಳಿಕಳುಹಿಸಿದರು. "ಶಾಶ್ವತನಿಧಿಯನ್ನಿಡುವುದು ಒಳ್ಳೆಯ ಅಭಿಪ್ರಾಯ. ನನಗೆ ಇನ್ನೊಂದು ವಿಚಾರ ಹೊಳೆದಿದೆ. ಮಂಡ್ಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಸರಿಯಾದ ಸ್ಥಳವಿಲ್ಲ. ಅದಕ್ಕಾಗಿ ಕಲಾಮಂದಿರವೊಂದನ್ನು ಸ್ವಾಮೀಜಿಯವರ ಜನ್ಮಶತಾಬ್ದದ ನೆನಪಿನಲ್ಲಿ ಕಟ್ಟುವ ಅಭಿಲಾಷೆ ಇದೆ. ಪುರಭವನದ ಆವರಣದಲ್ಲಿ ಪುರಸಭೆಯ ವತಿಯಿಂದಲೇ ಕಟ್ಟಿಸೋಣ. ನಿಮಗೆ ಈ ವಿಷಯ ತಿಳಿಸಲು ಬರಹೇಳಿದೆ" ಎಂದರು. ಹಾಗೆಯೇ ಪುರಸಭೆಯ ವತಿಯಿಂದ ಕಟ್ಟಡವನ್ನು ಕಟ್ಟಲಾಯಿತು. ೧೯೬೩ರಲ್ಲೇ ಕಟ್ಟಲು ಆಗಲಿಲ್ಲ. ಸ್ವಲ್ಪ ತಡವಾಗಿ ಕಟ್ಟಡ ನಿರ್ಮಾಣವಾಯಿತು. ಇದರ ಜವಾಬ್ದಾರಿಯನ್ನೆಲ್ಲ ಶ್ರೀಯುತ ಶಂಕರೇಗೌಡರೇ ವಹಿಸಿಕೊಂಡರು. ಈಗ ಅಲ್ಲಿ ಅನೇಕ ವಿಧವಾದ ಚಟುವಟಿಕೆಗಳು ನಡೆಯುತ್ತಿವೆಯೆಂದು ತಿಳಿದು ಬಂದಿದೆ.

ಸ್ವಾಮೀಜಿಯವರ ಜನ್ಮದಿನದಂದೇ ಶತಮಾನೋತ್ಸವ ಆಚರಿಸಲು ಕಾರ್ಯಕ್ರಮಗಳ ಪಟ್ಟಿ ತಯಾರಾಯಿತು. ಭಾವ ಚಿತ್ರದ ಮೆರವಣಿಗೆ, ಶಾಲಾಮಕ್ಕಳಿಗೆ ಸಿಹಿ ಹಂಚುವುದು, ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲುಗಳನ್ನೂ ಅತ್ಯಂತ ಬಡವ ಬಂಧುಗಳಿಗೆ ಆಸ್ಪತ್ರೆಯಲ್ಲಿ ಆ ದಿನ ಔಷಧ, ಚುಚ್ಚುಮದ್ದು ಗಳನ್ನೂ ಉಚಿತವಾಗಿ ಕೊಡಿಸುವುದು, ಜೈಲಿನಲ್ಲಿ ಕೈದಿಗಳಿಗೆ ಸಿಹಿ ಹಂಚುವುದು ಹಾಗೂ ಒಂದು ಗಂಟೆ ಕಾಲ ಭಜನೆ ಕಾರ್ಯಕ್ರಮ ಇತ್ಯಾದಿಗಳನ್ನು ಯೋಜಿಸಿಕೊಳ್ಳಲಾಯಿತು. ಆಗ ಜಿಲ್ಲಾಧಿಕಾರಿಗಳಾಗಿದ್ದ ಶ್ರೀಯುತ ಕೆ. ಲಕ್ಷ್ಮಣರಾಯರು ಮಂಡ್ಯ ನಗರದಲ್ಲಿರುವ ಎಲ್ಲ ಶಾಲಾಕಾಲೇಜು, ಸಂಘಸಂಸ್ಥೆಗಳೂ ಸೇರಿ ಒಂದೇ ಕಡೆ ಸಮಾರಂಭ ನಡೆಸಬೇಕೆಂದು ಸುತ್ತೋಲೆ ಹೊರಡಿಸಿದರು. ಕೊಲ್ಕತಾದ ರಾಮಕೃಷ್ಣ ಮಹಾಸಂಘದಿಂದ ಉತ್ಸವ ಯಶಸ್ವಿಯಾಗಿ ನಡೆಯಲೆಂದು ಶುಭಾಶಯ ಪತ್ರವೂ ಬಂದಿತು. ರೈತ ಸಂಘದ ಕೆಲವು ಯುವಕರ ಪೂರ್ಣ ಸಹಾಯ, ಸಹಕಾರದಿಂದ ಉತ್ಸವ ನಡೆಸುವುದಕ್ಕೆ ಬಹಳ ಅನುಕೂಲವಾಯಿತು.

ಸ್ವಾಮಿ ವಿವೇಕಾನಂದರ ಜನ್ಮದಿನದಂದೇ ಸಮಾರಂಭವನ್ನು ಆಚರಿಸಲು ನಿಶ್ಚಯವಾಗಿದ್ದರಿಂದ ಸ್ವಾಮಿ ಸೋಮನಾಥಾನಂದರು ಬರಲು ಸಾಧ್ಯವಾಗಲಿಲ್ಲ—ಮೈಸೂರು ಆಶ್ರಮದಲ್ಲಿ ಜಯಂತ್ಯುತ್ಸವದ ಕಾರಣ. ಆದರೆ ಅವರ ಸಲಹೆಯಂತೆ ಕಾರ್ಯಕ್ರಮ ನಡೆಸಲು ಉತ್ಸಾಹಿತರಾಗಿದ್ದೆವು. ಅಂದಿನ ಕಾರ್ಯಕ್ರಮ ಹೀಗಿತ್ತು:

ಬೆಳಗಿನ ಜಾವ ೪.೩೦ಕ್ಕೆ ಡಾ. ಸೇತೂರಾಯರ ಮನೆಯಿಂದ 'ಪ್ರಭಾತ್‌ಫೇರಿ'ಯೊಡನೆ ಆರಂಭ. ನೂರಾರು ಜನ ಪುರುಷರೂ ಮಹಿಳೆಯರೂ ನಾಮಸಂಕೀರ್ತನೆ ಮಾಡುತ್ತಾ ಬೀದಿ, ಬೀದಿಗಳಲ್ಲಿ ಭಗವನ್ನಾಮದ ಶ್ರವಣ ಮಾಡಿಸುತ್ತಾ, ೬ ಘಂಟೆಯ ವೇಳೆಗೆ ನಮ್ಮ ಮನೆ ತಲುಪಿದರು. ಮನೆ ಚಿಕ್ಕದು. ಆದರೇನು, ವಿಶಾಲ ಮನಸ್ಸಿನಿಂದ ಶ್ರದ್ಧಾಭಕ್ತಿಗಳಿಂದ ಬೀದಿಯಲ್ಲೇ ಕೀರ್ತನಾನಂದವನ್ನು ಬೀರುತ್ತಿದ್ದರು. ಆರು ಗಂಟೆಗೆ ಸರಿಯಾಗಿ ಸ್ವಾಮೀಜಿಯವರ ಅಲಂಕೃತ ಭಾವಚಿತ್ರಕ್ಕೆ ಮಹಾಮಂಗಳಾರತಿ. ಅನಂತರ ನೆರೆದಿದ್ದ ಭಕ್ತಸಮೂಹಕ್ಕೆ ಪ್ರಸಾದ ವಿನಿಯೋಗ (ಬಿಸಿಬೇಳೆ ಹುಳಿಯನ್ನ) ನಡೆಯಿತು.

ಬೆಳಿಗ್ಗೆ ೮.೦೦ ಗಂಟೆಗೆ ರಥಯಾತ್ರೆ. ಗೋಪಾಲಕೃಷ್ಣಸ್ವಾಮಿ ದೇವಸ್ಥಾನದ ರಥದಲ್ಲಿ ಸ್ವಾಮೀಜಿಯವರ ಭಾವಚಿತ್ರವನ್ನಿಟ್ಟು ಅಲಂಕೃತಗೊಳಿಸಿ ನಮ್ಮ ಮನೆಯಿಂದ ಹೊರಟ ಮೆರವಣಿಗೆ ವಿಶ್ವೇಶ್ವರಯ್ಯ ಕ್ರೀಡಾಂಗಣವನ್ನು ತಲುಪಿತು. ಅಲ್ಲಿ ಶಾಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಸಮವಸ್ತ್ರ ಹಾಗೂ ಬ್ಯಾಂಡ್ ಸೆಟ್‌ನೊಂದಿಗೆ ಸಿದ್ಧವಾಗಿದ್ದರು. ಕಾಲೇಜು ವಿದ್ಯಾರ್ಥಿ/ವಿದ್ಯಾರ್ಥಿನಿಯರು, ಪುರಜನರು, ಶಾಲಾಕಾಲೇಜುಗಳ ಮುಖ್ಯಸ್ಥರು, ಅಧ್ಯಾಪಕ ವರ್ಗದವರು, ಜಿಲ್ಲಾಧಿಕಾರಿಗಳು ಎಲ್ಲರೂ ಸೇರಿದ್ದರು. ರಥಯಾತ್ರೆಯ ಪ್ರಾರಂಭದಲ್ಲಿ ನಾಗಸ್ವರದವರು. ಅದರ ಹಿಂದೆ ಶಾಲೆಗಳ ಬ್ಯಾಂಡ್‌ಸೆಟ್, ಅವರ ಹಿಂದೆ ಜಿಲ್ಲಾಧಿಕಾರಿಗಳ ಸಮೇತ ಕಾಲ್ನಡಿಗೆಯಲ್ಲಿ ಪುರಜನರು, ಅದರ ನಂತರ ಮಹಿಳೆಯರು, ನಾಮಸಂಕೀರ್ತನೆಯೊಂದಿಗೆ ಹೆಜ್ಜೆಹಾಕತೊಡಗಿದರು. ರಥ ಹಿಂದೆ ಹೊರಟಿತು. ದಾರಿಯಲ್ಲಿ ಕೆಲವರು ಮನೆಮುಂದೆ ಮಂಗಳಾರತಿ, ಹಣ್ಣುಕಾಯಿ ನಿವೇದನ ಮಾಡುತ್ತಿದ್ದರು. ಸುಮಾರು ಎರಡು ಕಿಲೋಮೀಟರ್ ಉದ್ದದ ಮೆರವಣಿಗೆ. ಪೇಟೆಬೀದಿಯಲ್ಲಿ ವರ್ತಕರು ಮೆರವಣಿಗೆಯಲ್ಲಿ ನಡೆಯುತ್ತಿದ್ದವರಿಗೆ ಕಲ್ಲುಸಕ್ಕರೆ, ಪೆಪ್ಪರ್‌ಮೆಂಟ್, ಚಾಕಲೇಟ್ ಇತ್ಯಾದಿ ಹಂಚುತ್ತಿದ್ದರು. ಕಾಣಿಕೆ ಡಬ್ಬಿಯನ್ನೂ

ಹಿಡಿದು ಯಥಾಶಕ್ತಿ ಕಾಣಿಕೆಯನ್ನೂ ಪಡೆದೆವು. ಮಧ್ಯಾಹ್ನ ಹನ್ನೆರಡು ಗಂಟೆಗೆ ಉತ್ಸವ ಹೊರಟ ಸ್ಥಳಕ್ಕೆ ಬಂದು ತಲುಪಿತು. ಜಯಘೋಷ ಗಗನ ಮುಟ್ಟುವಂತಿತ್ತು. ರಥದಿಂದ ಸ್ವಾಮೀಜಿಯವರ ಭಾವಚಿತ್ರವನ್ನು ಇಳಿಸಿ ಪುರಸಭಾ ಪ್ರೌಢಶಾಲೆಗೆ ಕೊಂಡೊಯ್ದೆವು. ಸಾಯಂಕಾಲದ ಸಾರ್ವಜನಿಕ ಸಭೆ ಅಲ್ಲಿ ಏರ್ಪಾಡಾಗಿತ್ತು.

ಶಾಲಾ ಮಕ್ಕಳಿಗೆಲ್ಲ ಸಿಹಿ (ಲಾಡು) ಹಂಚಿ, ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಚಲಾಯಿತು. ನಾಲ್ಕು ಗಂಟೆಗೆ ಜೈಲಿನಲ್ಲಿ 'ಭಜನೆ' ಕಾರ್ಯಕ್ರಮಕ್ಕೆ ಸಿದ್ಧರಾದೆವು. ಅಲ್ಲಿ ಕೈದಿಗಳಿಗೆ ಸಿಹಿ ಹಂಚಲು ಹಾಗೂ ಭಜನೆಗೆ ಮೊದಮೊದಲಿಗೆ ಜೈಲಿನ ಅಧಿಕಾರಿಗಳು ಒಪ್ಪಲಿಲ್ಲ. ಆದರೆ ಜಿಲ್ಲಾಧಿಕಾರಿಗಳಿಂದ ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳಿಂದ ಅನುಮತಿ ಪಡೆದ ನಂತರ ಜೈಲಿನ ಮುಖ್ಯಸ್ಥರು ಒಪ್ಪಿದರು. ಸುಮಾರು ೫೦-೬೦ ಜನ ಭಾಗವಹಿಸಿದ್ದೆವು. ಕೈದಿಗಳಿಗೂ ಭಜನೆಯವರಿಗೆ ಮಧ್ಯೆ ಒಂದು ಹಗ್ಗ ಕಟ್ಟಿದ್ದರು. ಒಂದು ಘಂಟೆ ಕಾಲ ಭಜನೆಯ ನಂತರ ಸಿಹಿ ಹಂಚಿದೆವು. ಇದೊಂದು ಹೊಸ ಪ್ರಯೋಗ, ಬಹಳ ಆನಂದದಾಯಕವಾಗಿತ್ತು. ಅನಂತರ ಪ್ರತಿ ತಿಂಗಳೂ ಮೊದಲನೆಯ ಭಾನುವಾರ ಸಂಜೆ ೪ರಿಂದ ೫ ಗಂಟೆಯವರೆಗೆ 'ಭಜನೆ' ನಡೆಸಲು ಅನುಮತಿ ಪಡೆದೆವು. ಹಗ್ಗ ಕಟ್ಟುತ್ತಿದ್ದುದನ್ನು ತಪ್ಪಿಸಿ ಒಟ್ಟಿಗೆ ಕುಳಿತುಕೊಳ್ಳುವಂತೆ ಮಾಡಿದೆವು. ಅನಂತರದ ದಿನಗಳಲ್ಲಿ ಕೈದಿಗಳೇ ದೇವರ ಪಟವನ್ನಿಟ್ಟು ಅಲಂಕರಿಸುತ್ತಿದ್ದರು. ಕೆಲವರು ಹಾಡುತ್ತಿದ್ದರು. ಅನೇಕರಿಗೆ ಮನಃಪರಿವರ್ತನೆ ಆಯಿತೆಂದೂ ಜೈಲು ಅಧಿಕಾರಿಗಳು ಹೇಳಿದರು. ೧೯೬೩ರಿಂದ ಅನೇಕ ಭಜನೆ ಮಂಡಳಿಗಳವರಿಂದ ಈ ಕಾರ್ಯಕ್ರಮವು ತಪ್ಪದೆ ನಡೆಯುತ್ತಿತ್ತೆಂದೂ, ೪-೫ ವರ್ಷಗಳಿಂದ ನಿಂತುಹೋಗಿದೆಯೆಂದೂ ನನಗೆ ಮಂಡ್ಯದವರೊಬ್ಬರಿಂದ ತಿಳಿಯಿತು.

ಸಂಜೆ ೬ರಿಂದ ೭.೩೦ರವರೆಗೆ ಪುರಪ್ರೌಢಶಾಲೆಯಲ್ಲಿ ಶ್ರೀಯುತ ಕೆ.ವಿ.ಶಂಕರೇಗೌಡರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ. ಶಾಲಾ ಆವರಣ ಕಿಕ್ಕಿರಿದು ತುಂಬಿತ್ತು. ಸ್ವಾಮೀಜಿಯವರ ಜೀವನದ ಬಗ್ಗೆ ಸ್ಥಳೀಯರಿಬ್ಬರು (ಹೆಸರು ಮರೆತಿದೆ) ಮಾತನಾಡಿದ ನಂತರ ಅಧ್ಯಕ್ಷೀಯ ಭಾಷಣದಲ್ಲಿ "ಸ್ವಾಮಿ ವಿವೇಕಾನಂದರ ರಾಷ್ಟ್ರಪ್ರೇಮ, ಯುವಕರಿಗೆ ಅವರ ಸಂದೇಶ"ಗಳನ್ನು ವಿವರಿಸಿದರು.

ರಾತ್ರಿ ೮ರಿಂದ ೯ ಗಂಟೆಯವರೆಗೆ ಡಾ.ಸೇತೂರಾಯರ ಮನೆಯಲ್ಲಿ ಭಜನೆ, ಮಂಗಳಾರತಿ, ಪ್ರಸಾದ ವಿನಿಯೋಗದೊಂದಿಗೆ ಅಂದಿನ ಅವಿರತವಾಗಿ ನಡೆದ ಕಾರ್ಯಕ್ರಮಗಳ ಮುಕ್ತಾಯ.

ಆ ವರ್ಷ ಪೂರ್ತಿ ಸ್ವಾಮೀಜಿಯವರ ಜೀವನವನ್ನೇ ಕುರಿತು ಸ್ವಾಮಿ ಸೋಮನಾಥಾನಂದರು ಹಾಗೂ ಅನೇಕ ವಿದ್ವಾಂಸರುಗಳು ಭಾಷಣ ಮಾಡಿದರು. ಕೊಳ್ಳೇಗಾಲದ ಶ್ರೀ ನಾಗಲಿಂಗಾಚಾರ್ ಎಂಬುವರು ವಿವೇಕಾನಂದರ ಕುರಿತು ಕೀರ್ತನ-ಕಥೆಯನ್ನು ಮಂಡ್ಯದಲ್ಲೂ ಕೆಲವು ಹಳ್ಳಿಗಳಲ್ಲೂ ನಡೆಸಿದರು. ಹಳ್ಳಿಯ ಶಾಲೆಗಳಲ್ಲಿ ಸ್ವಾಮೀಜಿಯವರ ಕುರಿತು ಕಾರ್ಯಕ್ರಮಗಳು ನಡೆದವು. ಶತಮಾನೋತ್ಸವಗಳೆರಡರಲ್ಲೂ ಭಾಗವಹಿಸಿ ಆನಂದಿಸಿದ ಅನೇಕರು ಮಂಡ್ಯದಲ್ಲಿ ಈಗಲೂ ಇದ್ದಾರೆ. ಈ ಎಲ್ಲ ಕಾರ್ಯಕ್ರಮಗಳಿಗೂ ನಾನು ನೆಪಮಾತ್ರ. ಮನೆಯವರ ಹಾಗೂ ಮಂಡ್ಯದ ಎಲ್ಲ ವರ್ಗದ ಜನಗಳ ಪೂರ್ಣ ಸಹಕಾರದೊಂದಿಗೆ ನಡೆದಿದೆ. ಎಲ್ಲರಿಗೂ ನಾನು ಚಿರಋಣಿ. ನೆನಪಿಸಿಕೊಂಡಾಗ ಅಷ್ಟೊಂದು ಕಾರ್ಯಕ್ರಮಗಳೂ ಯಾವ ರೀತಿಯಲ್ಲಿ ಶಿಸ್ತು, ಸಂಭ್ರಮಗಳೊಡನೆ ನಡೆಯಿತೋ ತಿಳಿಯದಾಗಿದೆ. ಶ್ರೀರಾಮಕೃಷ್ಣರ ಅಸೀಮಕೃಪೆಯೇ ಇದಕ್ಕೆ ಕಾರಣ. ಪವಾಡಸದೃಶವಾದ ಅವರ ಕೃಪೆಯನ್ನು ನೆನೆದಾಗ ರೋಮಾಂಚನವಾಗುತ್ತದೆ. ಚಿಕ್ಕದಾದ 'ತೊರೆ'ಯೊಂದು ಹರಿಯುವ ದೊಡ್ಡ ನದಿಯೊಡನೆ ಸಂಗಮವಾದಂತೆ ೧೯೭೭ರಲ್ಲಿ ಮಂಡ್ಯದಿಂದ ಮೈಸೂರಿಗೆ ಬಂದು ಸೇರಿದೆ. ಆಶ್ರಮದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸುಯೋಗದಿಂದ ಉತ್ಸಾಹಿತಳಾದೆ. ೧೯೮೬ರಲ್ಲಿ ಶ್ರೀರಾಮಕೃಷ್ಣರ ೧೫೦ನೇ ಜನ್ಮ ಶತಮಾನೋತ್ಸವ ಸಂದರ್ಭದ ಉಪನ್ಯಾಸಗಳಲ್ಲಿ ಭಾಗವಹಿಸುವ ಅವಕಾಶ ದೊರಕಿತು. ಮೈಸೂರಿನ ಆಶ್ರಮದಲ್ಲಿ ನಡೆಯುವ ಯಾವ ಕಾರ್ಯಕ್ರಮವನ್ನೂ ನಾನು ತಪ್ಪಿಸಿಕೊಳ್ಳುತ್ತಿಲ್ಲ. ನನ್ನ ಎಲ್ಲ ಚಟುವಟಿಕೆಗಳಿಗೂ ಈಗಿನ ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿರುವ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು ಪ್ರೇರಕ ಶಕ್ತಿಯಾದರೆ ಚಾಲನೆಗೆ ಪ್ರೋತ್ಸಾಹಿಸಿದ ವ್ಯಕ್ತಿ ಸ್ವಾಮಿ ಸೋಮನಾಥಾನಂದಜಿಯವರು.

"ಏಳಿ! ಎದ್ದೇಳಿ!" ನನ್ನ ಜೀವನ ಸಂಧ್ಯೆಯಲ್ಲಿ ಒದಗಿರುವ ಆನಂದದಾಯಕ ಕಾಯಕ. ಪ್ರದರ್ಶನ ನಡೆಸಿದ ಪ್ರತಿ ಶಾಲೆಯಲ್ಲೂ ಶಿಕ್ಷಕವೃಂದದ ಸಹಾಯ, ವಿದ್ಯಾರ್ಥಿಗಳ ಸಹಕಾರದಿಂದ ಚೆನ್ನಾಗಿ ನಡೆದಿದೆ. ಉತ್ತಮ ಪ್ರತಿಕ್ರಿಯೆ ಬಂದಿದೆ. ಈವರೆಗೆ ಹತ್ತು ಶಾಲೆಗಳು, ಒಂದು ಮನೆಯಲ್ಲಿ ಕಾರ್ಯಕ್ರಮ ನಡೆದು, ಅವರುಗಳೆಲ್ಲ "ಇಂಥ ಪ್ರದರ್ಶನ, ಪ್ರಚಾರ ಜಾಗೃತಿಯನ್ನುಂಟು ಮಾಡುವಂಥದ್ದು" ಎಂದು ಪತ್ರಮುಖೇನ ತಿಳಿಸಿದ್ದಾರೆ. ಈ ಕಾರ್ಯಕ್ರಮಕ್ಕೆ ಅವಕಾಶಮಾಡಿಕೊಟ್ಟ 'ಚೇತನ ಟ್ರಸ್ಟ್'ನ ವ್ಯವಸ್ಥಾಪಕ ಮಂಡಳಿಗೆ ಕೃತಜ್ಞತಾಪೂರ್ವಕ ವಂದನೆಗಳು.

**ಆಶ್ರಮದ ಕಾರ್ಯಕ್ರಮಗಳು**

**ಜುಲೈ 2004**

| | | |
|---|---|---|
| ಶ್ರೀಗುರು ಪೂರ್ಣಿಮಾ | 02 | ಶುಕ್ರವಾರ |
| ಏಕಾದಶಿ | 13 | ಮಂಗಳವಾರ |
| ಸ್ವಾಮಿ ರಾಮಕೃಷ್ಣಾನಂದ ಜಯಂತಿ | 15 | ಗುರುವಾರ |
| ಏಕಾದಶಿ | 28 | ಬುಧವಾರ |

ಪ್ರತಿ ಶನಿವಾರ ಇಂಗ್ಲಿಷಿನಲ್ಲೂ ಪ್ರತಿ ಗುರುವಾರ ಮತ್ತು ಭಾನುವಾರಗಳಂದು ಕನ್ನಡದಲ್ಲೂ ಸಂಜೆ ೬ ರಿಂದ ೭ ಗಂಟೆಯವರೆಗೆ ಆಶ್ರಮದಲ್ಲಿ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.